# ಒಂದು ಬ್ರೇಕಿಂಗ್ ನ್ಯೂಸ್

■ ಜಗಲೂರ್ ವಿ. ಸ್ವಾಮಿ




ಹಾಸ್ಯದ ಕಾರ್ಯಕ್ರಮದ ಮಧ್ಯೆ ಕಾಣಿಸಿಕೊಂಡ 'ಬ್ರೇಕಿಂಗ್ ನ್ಯೂಸ್'ನಿಂದಾಗಿ ಟಿ.ವಿ. ವಾಲ್ಯೂಮ್ ಹೆಚ್ಚಿಸಿದ ಈರ್ಬದ್ರಿ; 'ನೀಲೂ ಬ್ರೇಕಿಂಗ್ ನ್ಯೂಸ್ ಬಾರೇ!' ಅಂತ ಅಂದು ಟಿ.ವಿ.ಯನ್ನೇ ಕಣ್ಣಲ್ಲಿ ಕಣ್ಣಿಟ್ಟು ನೋಡ್ತಿದ್ದವ–

'ಸಚಿವರೊಬ್ಬರ ಮನೆಯ ಕಾಂಪೌಂಡಿನಲ್ಲಿ ನಾಯಿಯೊಂದು ಬಿದ್ದು ಒದ್ದಾಡುತ್ತಿರುವ ಸಂಗತಿ ಬೆಳಕಿಗೆ ಬಂದಿದ್ದು; ನಾಯಿಯನ್ನು ನೋಡಲು ನೂಕು ನುಗ್ಗಲಾದ ಕಾರಣ, ಲಾಠಿ ಪ್ರಹಾರ ಮಾಡಲಾಗಿದೆ. ಹೆಚ್ಚಿನ ಮಾಹಿತಿಗೆ ನಮ್ಮ ಪ್ರತಿನಿಧಿ ಪರ್ಮಾನಂದ್ ರವರನ್ನು ಸಂಪರ್ಕಿಸಲಾಗುತ್ತದೆ' ಎಂದದ್ದು ಕೇಳಿ, ಟಿ.ವಿ. ವಾಲ್ಯೂಮ್ ಮತ್ತಷ್ಟು ಹೆಚ್ಚಿಸಿದ.

'ಹಲೋ ಪರ್ಮಾನಂದ್, ಈಗ ಅಲ್ಲಿನ ಪರಿಸ್ಥಿತಿ ಹೇಗಿದೆ?'

'ಮೇಡಂ, ಈಗ ಒಂದು ರೀತಿಯಲ್ಲಿ ಹತೋಟಿಯಲ್ಲೇ ಇದೆ.'

'ನಾಯಿ ಒದ್ದಾಡುತ್ತಿರುವ ವಿಷಯ ಸಚಿವರ ಗಮನಕ್ಕೆ ಬಂದಿಲ್ವಾ?'

'ಮೇಡಂ, ಮಾನ್ಯ ಸಚಿವರು ತೀರ್ಥಯಾತ್ರೆಗೆ ಹೋಗಿದ್ದಾರೆಂದು ತಿಳಿದು ಬಂದಿದೆ, ಹೀಗಾಗಿ ಅವರನ್ನು ಸಂಪರ್ಕಿಸಲು ಆಗ್ತಿಲ್ಲ.'

'ಯಾತಕ್ಕಾಗಿ ಆಗ್ತಿಲ್ಲಾ?'

'ಮೇಡಂ, ಯಾವಾಗ ಫೋನ್ ಮಾಡಿದ್ರೂ ವ್ಯಾಪ್ತಿ ಪ್ರದೇಶದಿಂದ ದೂರವಿದ್ದಾರೆ. ಸ್ವಲ್ಪ ಸಮಯದ ನಂತರ ಸಂಪರ್ಕಿಸಿ ಅಂತ ಸುಮಾರು ಮೂರ್‍ನಾಲ್ಕು ಗಂಟೆಯಿಂದ್ಲೂ ಹೇಳ್ತಾನೇ ಇದ್ದಾರೆ. ಹೀಗಾಗಿ ಸಾಧ್ಯವಾಗುತ್ತಿಲ್ಲ! ಮೇಲಾಗಿ, ಇಲ್ಲಿ ಮನೆಯಲ್ಲಿ ವಾಚ್‌ಮನ್ ಕೂಡಾ ಫುಲ್ ಟೈಟಾಗಿ ಅವ್ನೂ ಮಲಗಿಬಿಟ್ಟಿದ್ದಾನೆ.'

'ಹೋಗ್ಲಿ, ಆ ನಾಯಿಗೆ ಏನಾಗ್ತಿದೆ ಪರ್ಮಾನಂದ್?'

'ಅದನ್ನು ನಾನ್ಹೇಗೆ ಹೇಳ್ಲಿಕ್ಕಾಗುತ್ತೆ ಮೇಡಂ? ಒಂದು ರೀತಿಯಲ್ಲಿ ಅದೂ ಕೂಡಾ ಕುಡ್ದು ಫುಲ್‌ಟೈಟ್ ಆದಂತಿದೆ. ಒಂದೊಂದು ಸಲ ಎಡ್ಗಡೆ ಕಾಲನ್ನ ಮೇಲಕ್ಕೆ ಎತ್ತಿ ಇಳ್ಸುತ್ತೆ; ಮತ್ತೊಂದ್ಸಲ ಬಲ್ಗಡೆ ಕಾಲನ್ನ ಮೇಲಕ್ಕೆ ಎತ್ತಿಕೊಂಡು ಒಂದು ನಿಮಿಷ ಹಾಗೇ ಇದ್ದು ಪುನಃ ಕೆಳಗಿಳ್ಸತ್ತೆ.'

'ಪರ್ಮಾನಂದ್, ಆ ನಾಯಿ ಗೇಟ್‌ನಿಂದ ಎಷ್ಟು ದೂರದಲ್ಲಿದೆ?'

'ಮೇಡಂ. ಹೆಚ್ಚೂಕಡಿಮೆ ಅಂತ ಅಂದ್ರೆ. 10 ರಿಂದ 15 ಮೀಟರ್‌ನಷ್ಟು ಅಂತರದಲ್ಲಿದೆ.'

'ಅದು ನಿಜಕ್ಕೂ ಸಚಿವರೇ ಸಾಕಿರುವ ನಾಯೀನಾ?'

'ಮೇಡಂ.. ಇಲ್ಲಾ ಅಂದ್ರೆ ಕಾಂಪೌಂಡಿನಲ್ಲಿ ಇರ್‍ಲಿಕ್ಕೆ ಹೇಗೆ ಸಾಧ್ಯ?'

'ಅದರ ಬಣ್ಣ ಏನು ಪರ್ಮಾನಂದ್?'

'ಕಪ್ಪು, ಬಿಳಿ, ಕಂದು ಹೀಗೆ ನಾನಾ ಬಗೆಯ ಬಣ್ಣದಿಂದ ಕೂಡಿದೆ.'

'ಬಾಲ ತುಂಡಾಗಿದೆಯಾ?'

'ಇಲ್ಲಾ, ಮಾಮೂಲಾಗಿದೆ.'

'ಮೂತಿ ಅಗಲವಾಗಿದೆಯಾ?'

'ಹಾಗೇನೂ ಕಾಣಿಸ್ತಿಲ್ಲ ಮೇಡಂ.'

'ಹೋಗಲಿ, ಪರ್ಮಾನಂದ್, ಅಲ್ಲಿ ಜನ ಸೇರಿದ್ದಾರಾ.. ಅವ್ರು ಏನಂತಾರೆ?'

'ಜನಾಭಿಪ್ರಾಯ ಅಂತ ಅಂದ್ರೆ ಮೇಡಂ– ಸಚಿವರ ನಾಯಿಗೇ ಹೀಗಾಗಬಾರದಿತ್ತು! ಎನ್ನುವುದೇ ಆಗಿದೆ. ಅಂದ್ಹಾಗೆ ಮತ್ತೊಂದು ಹೊಸಾ ಸಂಗತಿ ಗೊತ್ತಾಗಿದೆ ಮೇಡಂ.'

'ಏನದು?'

'ಮತ್ತೊಂದು ನಾಯಿ ಬಂದು ಮಲಗಿರುವ ನಾಯಿಯನ್ನು ಎಲ್ಲಂದ್ರಲ್ಲಿ ಮೂಸಿ ನೋಡ್ತಾ ಇದೆ.'

'ಆ ಮೇಲೆ?'

'ಈಗ ಮಲಗಿರುವ ನಾಯಿ ಮೇಲೆದ್ದು ನಿಂತು. ಎದುರಿಗಿರುವ ಹೂವಿನ ಕುಂಡವೊಂದನ್ನು ಮೂಸಿ, ಒಂದು ಕಾಲನ್ನೆತ್ತಿ....'

'ಸರಿ. ಮುಂದೆ ಏನಾಯ್ತು, ಹೇಳಿ?'

'ಈಗ ಎರಡೂ ಒಟ್ಟಿಗೆ ಮನೆಯ ಹಿಂದಕ್ಕೆ ಓಡ್ತಿವೆ'

'ವೀಕ್ಷಕರೇ.. ಸಚಿವರ ಮನೆಯ ಕಾಂಪೌಂಡಿನಲ್ಲಿ ನಾಯಿಯೊಂದು ಬಿದ್ದು ಒದ್ದಾಡುತ್ತಿರುವ ಬಗ್ಗೆ ನೇರವಾದ ವಿವರಗಳನ್ನು ಕೇಳುತ್ತಿದ್ದೀರಿ. ನಮ್ಮ ವರದಿಗಾರರು ಇನ್ನೂ ಅಲ್ಲೇ ಇದ್ದಾರೆ. ಇನ್ನಷ್ಟು ವಿವರಗಳೊಂದಿಗೆ ಮತ್ತೆ ನಿಮ್ಮ ಮುಂದೆ ಬರುತ್ತೇವೆ. ಅಲ್ಲಿವರೆಗೆ ಒಂದು ಸಣ್ಣ ಬ್ರೇಕ್..' ಎನ್ನುತ್ತಿದ್ದಂತೇ ಬ್ರೇಕಿಂಗ್ ನ್ಯೂಸ್‌ಅನ್ನು ಬ್ರೇಕ್ ಮಾಡಿದ್ಲು ನೀಲೂ.

ಈರ್ಬದ್ರಿ ಮಾತ್ರ ಬಾಯಿ ತೆರೆದುಕೊಂಡೇ ಇದ್ದ!